ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 10.

ಮೃತಪಟ್ಟ ಹದಿನಾರುಲಕ್ಷ್ಮಣಿಂಗರ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಲಕ್ಷಂಬಾಯಿ, ಮೃತಪಟ್ಟ ಸದರೀ ಹದಿನಾರುಲಕ್ಷ್ಮಣಿಂಗರ ವೈಯಿಲ್ ಮೇರಿಗೂ ಮತ್ತು ನಾದನಿ ಆಗಬೇಕೆಂಬ ಹಕ್ಕುದಾರಿ ಮೇಲೆ ಅತ್ತಿಕುಪ್ಪ ತಾ|| ಕಿಕ್ಕೇರಿ ಕಸಬಾ ಸ್ಥಳದ ಸದರೀ ಲಕ್ಷಂಬಾಯಿ ಸದರೀ ವಾಸಸ್ಥನಾಗಿ ಮೃತಪಟ್ಟ ಹದಿನಾರುಲಕ್ಷ್ಮಣಿಂಗರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿನ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷಂಬಾಯಿಯ ಅರ್ಜಿಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹದಿನಾರುಲಕ್ಷ್ಮಣಿಂಗರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣವಾಗಿದೆ.

1887ನೇ ಇಸವಿ ಅರ್ಜೀ ನಂಬರ್ 36.

ಮೃತಪಟ್ಟ ಕರಗಜೋಯಿಯ ಆಸ್ತೀ ವಿಷಯದಲ್ಲಿ.—

ಅರ್ಜೀದಾರ ದ್ಯಾವೈಯನು ಮೃತಪಟ್ಟ ಸದರೀ ಕರಗಜೋಯಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮಕೂಡು ನರಸೀಪುರದ ತಾಲ್ಲೂಕು ಹೊಸ ಆಲಗೂಡು ಗ್ರಾಮದ ಸ್ಥಳದ ಡಿಟೋ ದ್ಯಾವೈಯನು ಡಿಟೋ ವಾಸಸ್ಥನಾಗಿ ಮೃತಪಟ್ಟ ಕರಗಜೋಯಿಯ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ದ್ಯಾವೈಯನ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರಗಜೋಯಿಯು ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣವಾಗಿದೆ.

1886ನೇ ಇಸವಿಯ ವ್ಯಾಜ್ಯದ ನಂಬರ್. 792.

ವಾದಿ	ಪ್ರತಿವಾದಿಗಳು
ಹೊಳೆನರಸಿಪುರದ ಕಸಬುದಲ್ಲಿ ಇರುವ ಸಾಂಗಲಿ ದೊಡ್ಡ ಕೃಷ್ಣಾಚಾರ್ ಮಗ ಸಾಂಗಲಿ ಸುಬ್ಬಣ್ಣಾಚಾರ್.	1ನೇ ಪ್ರತಿವಾದಿ ಮಠದ ಶ್ರೀ. ಶ್ರೀಮತ್ಸತೀರ್ಥ ಶ್ರೀಪಾದಂಗಳವರು. 2 ಇದೇ ಮಠದ ನವುಕರರಾದ ಶಿಂಧೋಳ್ ವ್ಯಾಸಾಚಾರ್.

1 ಮತ್ತು 2ನೇ ಪ್ರತಿವಾದಿಗಳಿಗೆ ವಾದಿಯು ಡ್ಯಾಮೇಜ್ ಬಾಬತು 400 ರೂಪಾಯಿಗೆ ನಿಮ್ಮ ಮೇಲೆ ವ್ಯಾಜ್ಯ ತಂದಿರುತ್ತಾನೆಯಾಗಿ ಈ ಕೋರ್ಟಿನಲ್ಲಿ ನೀವಾಗಲಿ, ಈ ವ್ಯಾಜ್ಯಕ್ಕೆ ಸಂಬಂಧಿಸಿದ ಮುಖ್ಯಾಗಳಾದ ದರೋಬಸ್ತು ಅಂಶಗಳಿಗೂ ಜವಾಬ್ ಹೇಳಲಿಕ್ಕೆ ಕ್ರಮಪ್ರಕಾರ ತಿಳಿಸಲ್ಪಟ್ಟ ಮತ್ತು ಸಮರ್ಥರಾದ ಅಥವಾ ಅಂಥಾ ದರೋಬಸ್ತು ಅಂಶಗಳಿಗೂ ಜವಾಬ್ ಹೇಳಲಿಕ್ಕೆ ಸಮರ್ಥನಾದ ಯಾವನಾದರೂ ಬಬ್ಬ ಇತರ ಮನುಷ್ಯನ ಸಂಗಡ ಬರುವ ಬಬ್ಬ ವಕೀಲನ ಮೂಲಕವಾಗಲಿ, ಸದರೀ ವಾದಿಗೆ ಜವಾಬ್ ಹೇಳಲಿಕ್ಕೆ ಈ ಕೋರ್ಟಿನಲ್ಲಿ ಸ್ಯ 1887ನೇ ಇಸವಿ ಫಿಬ್ರವರೀ 21ನೇ ಮಧ್ಯಂಬಳಿಗ್ಯೆ 11 ಘಂಟೆಗೆ ಹಾಜರಾಗುವಂತೆ ಇದರ ದೆಸೆಯಿಂದ ನೀವು ಸಮ್ಮನ್ಸ್ ಮಾಡಲ್ಪಟ್ಟಿರುವದಲ್ಲದೆ, ಮೇಲೆ ನಮೂದಿಸಲ್ಪಟ್ಟ ದಿನದಲ್ಲಿ ನೀವು ಹಾಜರಾಗದೇ ಹೋದರೆ ನಿಮ್ಮ ಗೈರ್ ಹಾಜರೀಯಲ್ಲಿ ಇಷ್ಯೂಗಳು ನಿರ್ಣಯ ಮಾಡಲ್ಪಡುವವು.

ವಾದಿ ನೋಡಬೇಕೆಂದು ಅಪೇಕ್ಷಿಸುವದನ್ನು ಮತ್ತು ನಿಮ್ಮ ಪಕ್ಷದಲ್ಲಿ ಪ್ರತಿವಾದಕ್ಕೆ ನಿಮಗೆ ಸಾಧಕವೆಂದು ಯೋಚಿಸುವ ಯಾವದಾದರೂ ದಸ್ತಾವೇಜುಗಳನ್ನು ನಿಮ್ಮ ಸಂಗಡ ತರತಕ್ಕದ್ದು.

ಸ್ಯ 1887ನೇ ಇಸವಿ ಫಿಬ್ರವರೀ 7ನೇ ಮಧ್ಯಂನಲ್ಲಿ ನಮ್ಮ ದಸ್ತಖತ್ತಿನಿಶಿ ಕೊಟ್ಟಿತು.

ಎನ್. ವೆಂಕಟವರದಯ್ಯಂಗಾರ್, ಮ್ಯುನೀಫ್.